## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಮೂರನೇ ಪಕ್ಷದವರಿಂದ (Third party inspection) ಮಾಡಲು ಜಿಲ್ಲಾವಾರು ಅರ್ಹ ಸಂಸ್ಥೆಗಳನ್ನು ಎಮ್‌ಪ್ಯಾನಲ್ ಮೆಂಟ್ ಮಾಡಿರುವುದನ್ನು ರದ್ದುಪಡಿಸುವ ಕುರಿತು.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/183/ಉಖಾಯೋ/2011 ಬೆಂಗಳೂರು ದಿನಾಂಕ: 08.09.2011.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/03/ಉಖಾಯೋ/2013 ಬೆಂಗಳೂರು ದಿನಾಂಕ: 16.11.2013

*-*-*-*

<u>ಪ್ರಸ್ತಾವನೆ</u>:-

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 2006-07ನೇ ಸಾಲಿನಿಂದ ಹಂತಹಂತವಾಗಿ ಅನುಷ್ಠಾನಗೊಳಿಸಿದ್ದು, ಈ ಸಂಬಂಧ, ಬೃಹತ್ ಪ್ರಮಾಣದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಮತ್ತು ಯೋಜನೆಯಡಿ ಪಾರದರ್ಶಕತೆಯನ್ನು ಕಾಪಾಡುವುದು ಮತ್ತು ಗುಣಮಟ್ಟವನ್ನು ಕಾಮಗಾರಿಗಳಲ್ಲಿ ಕಾಪಾಡುವುದು ಇತ್ಯಾದಿ ಇವುಗಳು ಮುಖ್ಯ ಉದ್ದೇಶಗಳಾಗಿರುವುದರಿಂದ, ಸರ್ಕಾರವು ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಮೂರನೇ ಪಕ್ಷದವರಿಂದ ಪರಿವೀಕ್ಷಣೆ ಮಾಡಿಸಿ ವರದಿಯನ್ನು ನೀಡಲು ಜಿಲ್ಲಾವಾರು ಅರ್ಹ ಸಂಸ್ಥೆಗಳನ್ನು ಎಮ್‌ಪ್ಯಾನಲ್ ಮಾಡಿ ಓದಲಾಗಿರುವ (1)ರಲ್ಲಿ ಅನುಮೋದಿಸಲಾಗಿತ್ತು.

ತದನಂತರ, ಕೇಂದ್ರ ಸರ್ಕಾರವು 2013-14ನೇ ಸಾಲಿನಲ್ಲಿ ಹೊರಡಿಸಿರುವ ಪರಿಷ್ಕೃತ ಕಾರ್ಯಚರಣೆಯ ಮಾರ್ಗಸೂಚಿಗಳು 2013, 4ನೇ ಆವೃತ್ತಿ, ಇದರನ್ವಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲದೇ ಇಲಾಖೆಯ ಇತರೆ ಯೋಜನೆಗಳಾದ, NRDWS, NBA, Suvarna Gramodaya, WGDP, DRGF ಇತರೆ ಇವುಗಳ ಕಾಮಗಾರಿಗಳನ್ನು ಪರಿಶೀಲಿಸಿ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳನ್ನು ಓದಲಾದ (2)ರಲ್ಲಿ ಕೆಲವು ಷರತ್ತುಗಳ ಅನುಪಾಲನೆಗೆ ಒಳಪಟ್ಟು ಎಮ್‌ಪ್ಯಾನಲ್ ಮಾಡಿ ಆದೇಶಿಸಲಾಗಿರುತ್ತದೆ. ಈಗ ಕಾಮಗಾರಿಗಳನ್ನು ಪರಿಶೀಲಿಸಿ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು, ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳ ಸೇವೆಯನ್ನು ಎಮ್‌ಪ್ಯಾನಲ್ ಮಾಡಿರುವುದರಿಂದ ಓದಲಾದ (1)ರ ಮೂರನೇ ಪಕ್ಷದವರಿಂದ ಪರಿವೀಕ್ಷಣೆ ಮಾಡಿ ವರದಿಯನ್ನು ನೀಡಲು ಎಮ್‌ಪ್ಯಾನಲ್ ಮಾಡಿರುವ ಅರ್ಹ ಜಿಲ್ಲಾವಾರು ಸಂಸ್ಥೆಗಳನ್ನು ರದ್ದು ಪಡಿಸುವುದು ಅವಶ್ಯಕವೆಂದು ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ:-

## <u>ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/183/ಉಖಾಯೋ/2011 ಬೆಂಗಳೂರು ದಿನಾಂಕ: 30.12.2013</u>

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಓದಲಾದ (1)ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಮೂರನೇ ಪಕ್ಷದವರಿಂದ ಪರಿಶೀಲಿಸಿ ವರದಿಯನ್ನು ನೀಡಲು, ಜಿಲ್ಲಾವಾರು ಅರ್ಹ ಸಂಸ್ಥೆಗಳನ್ನು ಎಮ್‌ಪ್ಯಾನಲ್ ಮಾಡಿ ಅನುಮೋದಿಸಿರುವ ಆದೇಶವನ್ನು ರದ್ದುಪಡಿಸಿದೆ. ಇನ್ನು ಮುಂದೆ ಮಹಾತ್ಮ ಗಾಂಧಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಎಲ್ಲಾ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲು ಓದಲಾದ (2)ರಲ್ಲಿ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಿಂದ ಪರಿಶೀಲನೆಗೆ ಕ್ರಮವಹಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುನಿಶ್ ಮೌದ್ಗಿಲ್)
ಸರ್ಕಾರದ ಕಾರ್ಯದರ್ಶಿ ಹಾಗೂ ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲಕರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲಕರು (ಆಡಿಟ್) ಕರ್ನಾಟಕ, ಬೆಂಗಳೂರು.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ.
4. ಮುಖ್ಯ ಕಾರ್ಯದರ್ಶಿ ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ
6. ಮುಖ್ಯ ಕಾರ್ಯಚರಣಾಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರ ಆಪ್ತ ಕಾರ್ಯದರ್ಶಿಗಳಿಗೆ.
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
9. ವಿಶೇಷ ಆಯುಕ್ತರು (ಅರಣ್ಯ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
10. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಾ ಮಹಲ್ ರಸ್ತೆ, ಮೈಸೂರು.
11. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸುತ್ತಾ, ಕಾಮಗಾರಿಗಳ ಅನುಷ್ಠಾನದ ಪರಿಶೀಲನೆಗೆ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳ ಸೇವೆಯನ್ನು ಬಳಸುವ ಮುನ್ನ ಸರ್ಕಾರದಿಂದ ಲಿಖಿತ್ ಮೂಲಕ ಅನುಮತಿಯನ್ನು ಪಡೆಯಲು ಸೂಚಿಸಿದೆ.
12. ರಾಜ್ಯದ ಸಂಬಂಧಿಸಿದ ಎಲ್ಲಾ ಓಂಬಡ್ಸ್‌ಮನ್‌ಗಳ ಮಾಹಿತಿಗಾಗಿ ಸಲ್ಲಿಸುತ್ತಾ, ಕಾಮಗಾರಿಗಳ ಅನುಷ್ಠಾನದ ಪರಿಶೀಲನೆಗೆ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳ ಸೇವೆಯನ್ನು ಬಳಸುವ ಮುನ್ನ ಸರ್ಕಾರದಿಂದ ಲಿಖಿತ ಮೂಲಕ ಅನುಮತಿಯನ್ನು ಪಡೆಯಲು ಕೋರಿದೆ.
13. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
14. ಜಂಟಿ ನಿರ್ದೇಶಕರು (ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
15. ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
16. ಜಂಟಿ ನಿರ್ದೇಶಕರು (ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
17. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
18. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಇವರ ಆಪ್ತ ಸಹಾಯಕರು.
19. ಸಹಾಯಕ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
20. ಸಂಬಂಧಿಸಿದ ರಾಜ್ಯ ಮತ್ತು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
21. M/s Effia Technologies, ಅವರಿಗೆ www.end2endsolutions.com ನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
22. ಶ್ರೀ. ಶ್ರೀನಿವಾಸ ಮಾರಂಗಪ್ಪನವರ್, ವಿಶ್ಲೇಷಕರು ಗಣಕಕೋಶ ಇವರ ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಯನ್ನು ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲು ಕೋರಿದೆ.
23. ದಿನಾಂಕ: 08.09.2011ರ ಸರ್ಕಾರದ ಆದೇಶ ಪತ್ರದ ಸಂಖ್ಯೆ: ಗ್ರಾಅಪ/183/ಉಖಾಯೋ/2011ರಲ್ಲಿ 3ನೇ ಪಕ್ಷದವರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಪರಿಶೀಲಿಸುವಂತೆ ಎಮ್‌ಪ್ಯಾನಲ್ ಮಾಡಿ ಅನುಮೋದಿಸಿರುವ ಎಲ್ಲಾ ಅರ್ಹ ಸಂಸ್ಥೆಗಳ ಮಾಹಿತಿಗಾಗಿ ಸಲ್ಲಿಸಿದೆ.
24. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ.